

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM. ಫೋನ್ : 114

೪ನೇ ವರ್ಷ 22ನೇ ಸಂಚಿಕೆ ಕೊಪ್ಪ 14-1-1990 ಭಾನುವಾರ ಬೆಲೆ 60 ಪೈಸೆ

ಕೃಷಿ ಉತ್ಪನ್ನ ಸಾಗಣೆಗೆ ರೈತರಿಗೆ ಕನಿಷ್ಠ ದರದಲ್ಲಿ ವ್ಯ. ಮಾ. ಸ. ಲಾರಿ ಸೌಕರ್ಯ ಲಭ್ಯ

ಶಿವಮೊಗ್ಗ : ಇಲ್ಲಿನ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯು ರೈತರ ಕೃಷಿ ಹುಟ್ಟುವಳಿಗಳನ್ನು ಸಮಿತಿ ಪ್ರಾಂಗಣಕ್ಕೆ ತಂದು ಮಾರಾಟ ಮಾಡಲು [illegible] ವಾಗುವಂತೆ ಕನಿಷ್ಠ ದರದಲ್ಲಿ ಲಾರಿ [illegible] ಣಿಕೆ ಸೌಲಭ್ಯವನ್ನು ಈಗಾಗಲೇ ಒದಗಿ[illegible] ಸಿದ್ದು, ಅಡಿಕೆ ಮತ್ತಿತರ ಬೆಳೆಗಳ [illegible] ಕಾಲದಲ್ಲಿಯೂ ಹಿಂದಿನಂತೆಯೇ ಶಿವಮೊಗ್ಗ, ತೀರ್ಥಹಳ್ಳಿ, ಕೊಪ್ಪ ಮತ್ತು [illegible] ತಾಲ್ಲೂಕುಗಳಲ್ಲಿ ಈ ಸೌಲಭ್ಯದ [illegible] ರೈತರು ಸಮಿತಿಯ [illegible] ಪತ್ರ ಅಥವಾ ದೂರ[illegible] ಸಂಪರ್ಕಿಸಬಹುದೆಂದು ಸಮಿತಿಯ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಪ್ಪಕ್ಕೆ ಕೋರ್ಟು? ಆಸೆಗೆ ಚಿಗುರು

ಕೊಪ್ಪ : ಇಲ್ಲಿ ನ್ಯಾಯಾಲಯಕ್ಕೆ ಸೂಕ್ತವಾದ ಕಟ್ಟಡವೊಂದನ್ನು ಸೂಚಿಸುವಂತೆ ಸರ್ಕಾರ ಕೇಳಿರುವುದು ಸದ್ಯವೇ ನ್ಯಾಯಾಲಯ ಸ್ಥಾಪನೆಯಾದೀತೆಂಬ ಆಸೆಗೆ ಪುನಃ ಚಿಗುರು ಮೂಡಿಸಿದೆ.

ರಾಜ್ಯದಲ್ಲಿ ಹೊಸದಾಗಿ ಐದಾರು ನ್ಯಾಯಾಲಯಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೆನ್ನಲಾಗಿದ್ದು, ಈ ಹೈಕಿಬಹಳ ವರ್ಷಗಳಿಂದ ಬೇಡಿಕೆಯಿರುವ ಕೊಪ್ಪದ ಪ್ರಕರಣವೂ ಸರ್ಕಾರದ ಪರಿಶೀಲನೆಯಲ್ಲಿದೆ ಎನ್ನಲಾಗಿದೆ.

ಕೊಪ್ಪದಲ್ಲಿ ಸದ್ಯ ಜಿ. ಪ ಅಧೀನದಲ್ಲಿರುವ ಲೋಕೋಪಯೋಗಿ ಇಲಾಖಾ ಕಟ್ಟಡವಾದ ಹಳೇ ಆಸ್ಪತ್ರೆ ಸಮುಚ್ಚಯವನ್ನು ಪುರಸಭೆ, ತಾ. ಪಂ ಸಮಿತಿಗಳು ಈ ಉದ್ದೇಶಕ್ಕಾಗಿ ಶಿಫಾರ್ಸು ಮಾಡಿ ಜಿ. ಪ ಅನುಮೋದನೆಗೆ ಕಳಿಸಿವೆ.

ಜಿಲ್ಲಾ ನ್ಯಾಯಾಧೀಶರು ಕಟ್ಟಡವನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ಸೂಕ್ತವೆಂದು ಶಿಫಾರ್ಸು ಮಾಡಿದಲ್ಲಿ ಮಾತ್ರ ಅದನ್ನು ಸರ್ಕಾರವೂ ಅಂಗೀಕರಿಸಿ, ನ್ಯಾಯಾಲಯಕ್ಕೆ ಮಂಜೂರಾತಿ ನೀಡಬಹುದು.

ತೊಡಕು

ಆದರೆ ತೊಡಕು ಇದಕ್ಕಿಂತ ಮೂಲಭೂತವಾದ ಹಂತದಲ್ಲೇ ಇದೆ. 1984-85 ರಲ್ಲೇ ಒಮ್ಮೆ ಕೊಪ್ಪದಲ್ಲಿ ನ್ಯಾಯಾಲಯ ಸ್ಥಾಪನೆಗಾಗಿ ನಡೆದ ನಾಗರಿಕರ ಯತ್ನ ಇನ್ನೇನು ಫಲ ನೀಡಲಿದೆ ಎನ್ನುವವರೆಗೆ ಹೋಗಿತ್ತು. ಆದರೆ ಇಲ್ಲಿಂದ "ಕೇವಲ 22 ಕಿ. ಮೀ. ದೂರದ ನ.ರಾ.ಪುರದಲ್ಲೇ ಸುಸಜ್ಜಿತ ನ್ಯಾಯಾಲಯವೊಂದು ಇರುವ" ನೆಪದಲ್ಲಿ ಆ ಪ್ರಯತ್ನ ಯಶಸ್ಸು ಕಾಣದೆ ಹೋಯಿತು. (ಅದಕ್ಕೂ ಮೊದಲೇ ಒಮ್ಮೆ ನ್ಯಾಯಾಲಯಕ್ಕಾಗಿ ಕಟ್ಟಡ ಕೂಡ [illegible] ಆಗಲೂ ಕೊನೇ ಘಳಿಗೆಯಲ್ಲಿ ನ್ಯಾಯಾಲಯ ಪಕ್ಕದ [illegible].)

ನೆಪ ಇದಾದರೂ, ಮುಖ್ಯ ಕಾರಣ ನ್ಯಾಯಾಲಯ ಬೇಕೆಂದು ರಾಜಕೀಯ ಒತ್ತಡ ಬೀಳದೆ ಇದ್ದುದೇ ಆಗಿದೆ. ಏಕೆಂದರೆ 'ಕೇವಲ 22 ಕಿ. ಮೀ.ಗಳ' ಪ್ರಶ್ನೆಯಾದರೂ ಸಹ ಕೊಪ್ಪ ಮತ್ತು ಶೃಂಗೇರಿ ತಾ|| ಗಳ ಅತ್ಯಂತ ಮೂಲೆಯ ಹಳ್ಳಿಗಳಿಗೆ ಅದೇ ದೊಡ್ಡ ಸಮಸ್ಯೆಯಾಗಿದೆ. ಆಗ ಈ ಬಗ್ಗೆ ಅತ್ಯಂತ ಗಹನವಾಗಿ ಅಧ್ಯಯನ ಮಾಡಿದ್ದ ಜಿಲ್ಲಾ ನ್ಯಾಯಾಧೀಶ ಎಸ್. ಬಿ. ತಂಬದ್‌ರವರು ಇದನ್ನು ಬಹಳ ಕೂಲಂಕಷವಾಗಿ ಮತ್ತು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಕೊಪ್ಪದಲ್ಲೊಂದು ನ್ಯಾಯಾಲಯ ಸ್ಥಾಪನೆ ಅತ್ಯಂತ ಅಗತ್ಯ ಮತ್ತು ಪ್ರಶಸ್ತ ಎಂದು ಶಿಫಾರ್ಸು ಮಾಡಿದ್ದರು.

ಉಳಿದ ಕೆಲಸ ಪೂರ್ತಿಯಾಗಿ ರಾಜಕೀಯ ಒತ್ತಡದ ಮೇಲೆ ನಿಂತಿತ್ತು. ಆದರೆ ನ.ರಾ. ಪುರದವರನ್ನು ಎದುರು ಹಾಕಿಕೊಳ್ಳಲು ಯಾರೂ ಇಚ್ಛಿಸುವುದಿಲ್ಲವಾಗಿ ಆ ಪ್ರಯತ್ನ ಪೂರ್ಣ ರೂಪದಲ್ಲಿ ನಡೆಯಲಿಲ್ಲ. ಅದೇ ಹೊತ್ತಿಗೆ ಸರಿಯಾಗಿ ಆರಂಭವಾದ ರಾಜ್ಯ ಸರ್ಕಾರದ ಹಣಕಾಸಿನ ಮುಗ್ಗಟ್ಟೂ ಸೇರಿಕೊಂಡು, ಜನತೆಯ ಈ ಪ್ರಯತ್ನದ ಸಸಿ ಫಲ ನೀಡುವ ಮೊದಲೇ ಮುರುಟಿ ಹೋಯಿತು.

ಜನತೆಯದೇ ಬೇಡಿಕೆ

ಕೊಪ್ಪದಲ್ಲಿ ನ್ಯಾಯಾಲಯ ಸ್ಥಾಪನೆಯಾಗಬೇಕೆಂಬುದು ಕೊಪ್ಪ, ಶೃಂಗೇರಿ ಈ ಎರಡೂ ತಾ||ಗಳ ಅತಿ ಹಿಂದುಳಿದ ಹಳ್ಳಿಗಾಡಿನ ಜನತೆಯದೇ ಬೇಡಿಕೆ ಕೋರತ್ತು. ಯಾರೋ 'ಕೆಲ ವಕೀಲರದ್ದು ಮಾತ್ರ' ಅಲ್ಲ. ನೂತನ ಶಾಸಕ ಶಾಮಣ್ಣನವರಿಗೆ ಕೂಡ ಈ ವಿಷಯ ತಿಳಿಯದುದೇನಲ್ಲ. ಆದ್ದರಿಂದ ಈಗಲಾದರೂ ದೃಢ ರಾಜಕೀಯ ನಿರ್ಧಾರ ಕೈಗೊಂಡು, ಈ ಪ್ರದೇಶದ ಜನತೆಯ ಹದಿನೈದಿಪ್ಪತ್ತು ವರ್ಷಗಳ ಈ ಬೇಡಿಕೆ ಇನ್ನಾದರೂ ಕೈಗೂಡುವಂತೆ ಅವರು ಸರ್ಕಾರದ ಮೇಲೆ ಒತ್ತಾಯ ತಂದು ಯಶಸ್ವಿಯಾಗುತ್ತಾರೆಂಬ ನಿರೀಕ್ಷೆ ಈಗ ಎಲ್ಲೆಡೆ ವ್ಯಕ್ತವಾಗುತ್ತಿದೆ.

ಮಧ್ಯಂತರ ಮಂಡಲಗಳಿಗೆ ಚುನಾವಣೆ ಫೆ. 25ರಂದು

ಕೊಪ್ಪ: ಚುನಾವಣೆ ಬಾಕಿಯಿದ್ದ ರಾಜ್ಯದ ಹಲವು ಪುರಸಭೆಗಳು, ಮಧ್ಯಂತರ ಮಂಡಲ ಪಂಚಾಯ್ತಿಗಳು ಮುಂತಾದುವಕ್ಕೆ ಫೆ. 25ರಂದು ಚುನಾವಣೆ ನಡೆಯಲಿದ್ದು, ಇದರಲ್ಲಿ ಕೊಪ್ಪ, ಶೃಂಗೇರಿ, ನ.ರಾ. ಪುರ ಇವುಗಳೂ ಸೇರಿವೆ.

ಇದಕ್ಕಾಗಿ ನಾಮಪತ್ರಗಳ ಸಲ್ಲಿಕೆ ಜ. 24ರಿಂದ 31ರವರೆಗೆ ಹಾಗೂ ಪರಿಶೀಲನೆ ಫೆ. 2ರಂದು ಎನ್ನಲಾಗಿದೆ.

ನ.ರಾ.ಪುರ ವರ್ತಕ ಸಂಘದ 2 ನೇ ವಾರ್ಷಿಕೋತ್ಸವ

ನ. ರಾ. ಪುರ : ಇಲ್ಲಿನ ವರ್ತಕ ಸಂಘದ ಎರಡನೇ ವಾರ್ಷಿಕೋತ್ಸವವು ಡಿ 27 ರಂದು ಸ್ಥಳೀಯ ಗಣ್ಯ ವರ್ತಕರಾದ ಎಚ್. ಬಾಬಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಹಸೀಲ್ದಾರ್ ಪ ಭಾಸ್ಕರಶರ್ಮ, ಜಿಲ್ಲಾ ಪರಿಷತ್ ಸದಸ್ಯ ವಿ.ಆಗ ಚಂದ್ರಶೇಖರ್, ಮತ್ತು ಸ್ಥಳೀಯ ಗಣ್ಯ ವರ್ತಕ ಎಚ್. ಜೆ. ಅಬ್ದುಲ್ ಸಮದ್ ಸಾಹೇಬ್ ಮುಖ್ಯ ಅತಿಥಿಗಳಾಗಿದ್ದರು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷ ಎಚ್. ಜೆ. ಅಬ್ದುಲ್ ಮಾಜಿದ್ ಸಾಹೇಬ್ ಸ್ವಾಗತಿಸಿದರು. ರಾಜಗೋಪಾಲ ಶೆಟ್ಟಿ ವರದಿಯನ್ನು ಒಪ್ಪಿಸಿದರು. ಸಿ. ವಿ. ಮಥಾಯಸ್ ವಂದಿಸಿದರು.

ರಕ್ತ, ಮಲ, ಮೂತ್ರ, ಕಫ ಪರೀಕ್ಷೆ ಶಿಬಿರ

ಬಿಲಗದ್ದೆ : ಇಲ್ಲಿನ ವಿವೇಕಾನಂದ ಯುವಕ ಸಂಘ ಮತ್ತು ಪವಿತ್ರ ಮಹಿಳಾ ಸಮಾಜಗಳ ಆಶ್ರಯದಲ್ಲಿ ಮಲ, ಮೂತ್ರ, ಕಫ ಮತ್ತು ರಕ್ತ ಪರೀಕ್ಷೆ ಶಿಬಿರವೊಂದನ್ನು ಬಾಲ ವಿಕಾಸ ಯೋಜನೆ ಸಹಕಾರದೊಂದಿಗೆ 16-1-90 ರಂದು ಅಂಗನವಾಡಿ ಆವರಣದಲ್ಲಿ ಏರ್ಪಡಿಸಲಾಗಿದೆ. ಶೃಂಗೇರಿಯ ಧನ್ವಂತರಿ ಆಸ್ಪತ್ರೆಯ ಡಾ|| ಹೇರಳೆ ಮತ್ತು ತಂಡ ಶಿಬಿರ ನಡೆಸಿಕೊಡುತ್ತಾರೆ. ನೋಂದಣಿ : ಸ್ಥಳದಲ್ಲೇ. ಸಾರ್ವಜನಿಕರು ಉಪಯೋಗ ಪಡೆಯಲು ಕೋರಲಾಗಿದೆ.

ವೀರಭದ್ರ ದೇವಸ್ಥಾನದ ಬಗ್ಗೆ ಜ. 22 ರಂದು ಸಭೆ

ಕೊಪ್ಪ : ಇಲ್ಲಿನ ವೀರಭದ್ರಸ್ವಾಮಿ ದೇವಸ್ಥಾನವನ್ನು ಮುಜರಾಯಿ [illegible] ಸೇರಿಸಬೇಕೆಂಬ ಬೇಡಿಕೆಯ [illegible] ಚರ್ಚಿಸಲು 22-1-90 ಸೋಮವಾರ ಬೆ 11 ಗಂಟೆಗೆ ತಹಸೀಲ್ದಾರ್ ಕಛೇರಿ ಸಭಾಂಗಣದಲ್ಲಿ ಶಾಸಕರು, ಜಿ. ಪ. ಸದಸ್ಯರು, ಶಾಂತಿ ಸಮಿತಿ ಸದಸ್ಯರು ಮತ್ತು ನಾಗರಿಕರ ಸಭೆ ಕರೆಯಲಾಗಿದೆ. ಈ ವಿಚಾರದಲ್ಲಿ ತಮ್ಮ ಆಕ್ಷೇಪ ಅಥವಾ ಅಭಿಪ್ರಾಯ ತಿಳಿಸಬಿಚ್ಛಿಸುವವರು ಸಭೆಗೆ ಹಾಜರಾಗಲು ತಹಸೀಲ್ದಾರ್ ಕೋರಿದ್ದಾರೆ.

ಮೈಸೂರು ಬ್ಯಾಂಕ್ ಗ್ರಾಹಕರ ಸಭೆ

ಕೊಪ್ಪ: ಇಲ್ಲಿನ ಮೈಸೂರು ಬ್ಯಾಂಕ್ ಶಾಖೆಯಲ್ಲಿ ಜ. 9ರಂದು ಗ್ರಾಹಕರ ಸಭೆ ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ನಡೆಯಿತು. ಬಿ.ಡಿ.ಒ. ಮುಖ್ಯ ಅತಿಥಿಯಾಗಿದ್ದರು. ಬ್ಯಾಂಕಿನ ಮೈಸೂರು ರೀಜನಲ್ ಮ್ಯಾನೇಜರ್ ಕೆ. ಎಸ್. ರಾಧಾಕೃಷ್ಣ ಗ್ರಾಹಕರ ಪ್ರಶ್ನೆಗಳಿಗೆ ಸಮಾಧಾನಗಳನ್ನು ನೀಡಿ, ಹಲವು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು. ಶಾಖಾ ಮ್ಯಾನೇಜರ್ ಸೀತಾರಾಮ ಭಟ್ ಸ್ವಾಗತಿಸಿ, ಅಕೌಂಟೆಂಟ್ ವಿ. ಎಸ್. ಆಚಾರ್ಯ ವಂದಿಸಿದರು.

ನೈಸರ್ಗಿಕ ಕೃಷಿ ತಜ್ಞ ಪ್ರದೀಪ್ ತಪಸ್‌ರವರಿಂದ ಮತ್ತೊಮ್ಮೆ ಕೃಷಿ ವಿಚಾರ ಸಂಕಿರಣ ಮತ್ತು ಸ್ಲೈಡ್ ಪ್ರದರ್ಶನ

ಕೊಪ್ಪ: ಇಲ್ಲಿನ ಸಿಂಡಿಕೇಟ್ ಬ್ಯಾಂಕ್, ಜೂನಿಯರ್ ಛೇಂಬರ್ ಮತ್ತು ಕೃಷಿ ವಿಚಾರ ವಿನಿಮಯ ಕೇಂದ್ರ ಇವುಗಳ ಸಂಯುಕ್ತ ಆಶ್ರಯದಲ್ಲಿ ನೈಸರ್ಗಿಕ ಕೃಷಿ ತಜ್ಞರಾದ ಧಾರವಾಡದ ಪ್ರದೀಪ್ ತಪಸ್ ಅವರು ಮತ್ತೊಮ್ಮೆ ಈ ಕೃಷಿ ವಿಧಾನದ ಬಗ್ಗೆ ವಿಚಾರ ಸಂಕಿರಣ ನಡೆಸಿಕೊಡಲಿದ್ದಾರೆ.

ಜ 27 ಶನಿವಾರ ಮತ್ತು 28 ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ನಡೆಯುವ ಈ ಶಿಬಿರದಲ್ಲಿ ಸ್ಲೈಡ್‌ಗಳ ಪ್ರದರ್ಶನ ಹಾಗೂ ಅನ್ನ ಮೋತ್ರದ ಪ್ರಾತ್ಯಕ್ಷಿಕೆ — ಇವೂ ಸೇರಿವೆ.

ತಾ|| ಕಛೇರಿ ಹಿಂಭಾಗದಲ್ಲಿರುವ ಚೆಟ್ಟಿಮಕ್ಕಿ ದೇವಸ್ಥಾನದ ಪಕ್ಕದ ಹುಣ್ಣಿಕಾಡಿಗೆ ನಂಜುಂಡರಾವ್ ಅವರ ಮನೆಯಲ್ಲಿ ಏರ್ಪಟ್ಟಿರುವ ಕಾರ್ಯಕ್ರಮಕ್ಕೆ ನಿಗದಿಸಿರುವ 25 ರೂ ಪ್ರತಿನಿಧಿ ಶುಲ್ಕವನ್ನು 25-1-90ರೊಳಗೆ ಕೊಪ್ಪ ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ 6804ಕ್ಕೆ ಜಮಾ ಮಾಡಿ ಅಥವಾ ಮ್ಯಾನೇಜರ್/ಗ್ರಾ. ಅ. ಅಧಿಕಾರಿಗಳಲ್ಲಾಗಲಿ, ಕೃ. ವಿ. ವಿ. ಕೇಂದ್ರದ ಕಾರ್ಯದರ್ಶಿ ಹಡಿಗೆ ಶ್ರೀನಿವಾಸ್ ರವರಲ್ಲಾಗಲಿ ಪಾವತಿಸಿ, ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಲು ಕೋರಲಾಗಿದೆ.

ಹಣ್ಣು ಮತ್ತು ತರಕಾರಿ ಸಂಸ್ಕರಣೆಯ ತರಬೇತಿ

ಇದೇ ಸಂಯುಕ್ತ ಆಶ್ರಯದಲ್ಲಿ ಜ. 23 ರ ಮಂಗಳವಾರ ಕೊಪ್ಪ ಮಹಿಳಾ ಸಮಾಜದಲ್ಲಿ ಗ್ರಾಮೀಣ ಮಹಿಳೆಯರಿಗಾಗಿ "ಹಣ್ಣು ಮತ್ತು ತರಕಾರಿ ಸಂಸ್ಕರಣೆ" ಒಂದು ದಿನದ ಉಚಿತ ತರಬೇತಿ ಶಿಬಿರವನ್ನು ಮೂಡಿಗೆರೆ ಕೃಷಿ ಸಂಶೋಧನಾ ಕೇಂದ್ರದ ತಜ್ಞರಿಂದ ನಡೆಸಲಿದೆ. ಆಸಕ್ತ ಮಹಿಳೆಯರು ತಾ. 20 1 90ರೊಳಗಾಗಿ ಮ್ಯಾನೇಜರ್/ಗ್ರಾ. ಅ. ಅಧಿಕಾರಿ ಅಥವಾ ಕೃ. ವಿ. ವಿ. ಕೇಂದ್ರದ ಕಾರ್ಯದರ್ಶಿ — ಇವರಲ್ಲಿ ಹೆಸರು ನೋಂದಾಯಿಸಬೇಕಾಗಿದೆ.

ನೈಸರ್ಗಿಕ ಕೃಷಿ ತಜ್ಞ ಪ್ರದೀಪ್ ತಪಸ್

• ಆಳವಾದ ಪರಿಜ್ಞಾನ, ವಿಷಯ ಮಂಡನೆಯ ಅಮೋಘ ಶೈಲಿ

ಕೃಷಿಕನಾಗಿ ಪರಿವರ್ತನೆಗೊಂಡ ಇಂಜಿನಿಯರ್, ಧಾರವಾಡ ಜಿಲ್ಲೆಯ ಪ್ರದೀಪ್ ತಪಸ್ ಡಿಸೆಂಬರ್ 24ರಂದು ಕೊಪ್ಪದಲ್ಲಿ ನಡೆಸಿಕೊಟ್ಟ ನೈಸರ್ಗಿಕ ಕೃಷಿ ವಿಚಾರ ಸಂಕಿರಣ ಎಲ್ಲೆಡೆ ಆಸಕ್ತಿ, ಕುತೂಹಲ ಮೂಡಿಸಿದೆ. ಅವರ ಬಗ್ಗೆ ಇಲ್ಲಿ ಕಿರು ಪರಿಚಯ ನೀಡಲಾಗಿದೆ.

ಇನ್ನೂ 40ರ ಅಂಚಿನಲ್ಲಿರುವ ಪ್ರದೀಪ್ ತಪಸ್ ಚಿಕ್ಕವರಿರುವಾಗಲೇ ಅವರ ತಂದೆಯವರ ಪಿತ್ರಾರ್ಜಿತ ಆಸ್ತಿಯೆಲ್ಲವೂ ಮಾರಾಟವಾಗಿ ಹೋಗಿ, ಇವರ ಕುಟುಂಬಕ್ಕೆ ಬೇಸಾಯದ ಬದುಕಿನ ಸಂಪರ್ಕವೇ ತಪ್ಪಿಹೋಗಿತ್ತು. ಆದರೂ ಬಿ ಇ. ವಿದ್ಯಾರ್ಥಿಯಾಗಿದ್ದಾಗಲೇ ಬೇಸಾಯ ಇವರನ್ನು ಆಕರ್ಷಿಸಿತ್ತು. ಬಿ. ಇ. ಮುಗಿಸಿ, ಪಾಂಡಿಚೆರಿಯ ಅರವಿಂದಾಶ್ರಮದ 'ಗ್ಲೋರಿಯಾ ಫಾರ್ಮ್ಸ್'ಗೆ ನೈಸರ್ಗಿಕ ಬೇಸಾಯದ ತರಬೇತಿಗಾಗಿ ಸೇರಿದರು.

ಅಲ್ಲಿ ಶಿಕ್ಷಣ ಮುಗಿಸಿ, ಉನ್ನತ ಅಧ್ಯಯನಕ್ಕಾಗಿ ಅಮೆರಿಕ, ಜರ್ಮನಿ, ಹಾಲೆಂಡ್‌ಗಳಿಗೆ ಕಳಿಸಲ್ಪಟ್ಟರು. ಅನಂತರ, ಅರವಿಂದಾಶ್ರಮದವರು ಸೌದಿ ಅರೇಬಿಯದಲ್ಲಿ ವ್ಯವಸ್ಥೆ ಮಾಡಿದ್ದ ನೈಸರ್ಗಿಕ ಕೃಷಿಯ ಜಮೀನುಗಳನ್ನು ನೋಡಿಕೊಳ್ಳಲು ಇವರನ್ನು ಕಳಿಸಲಾಯಿತು.

[illegible] ಬಂದ ನಂತರ 1987ರಿಂದ ಧಾರವಾಡ ಜಿಲ್ಲೆಯಲ್ಲಿ 100 ಎಕರೆ ಭೂಮಿಯಲ್ಲಿ ಈ ಕೃಷಿ ಪದ್ಧತಿಯಲ್ಲಿ ಸ್ವಯಂ ಬೇಸಾಯ ಆರಂಭಿಸಿದರು. ಅನಂತರ ಧಾರವಾಡದಲ್ಲಿರುವ ಗ್ರಾಮೀಣ ಅಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆ ಇವರನ್ನು ಸಂದರ್ಶಕ ಉಪನ್ಯಾಸಕರನ್ನಾಗಿ ಆಹ್ವಾನಿಸಿತು. ಆ ಸಂಸ್ಥೆಯ ವ್ಯಾಪ್ತಿಗೆ ಬರುವ ಧಾರವಾಡ, ಬೆಳಗಾವಿ, ಬಿಜಾಪುರ, ರಾಯಚೂರು ಜಿಲ್ಲೆಗಳಲ್ಲಿ ಇಂದು ಇವರ ನೂರಾರು ಜನ 'ವಿದ್ಯಾರ್ಥಿಗಳು' ನೈಸರ್ಗಿಕ ಕೃಷಿ ನಡೆಸುತ್ತಿದ್ದಾರೆ.

ತಪಸ್‌ರವರು ವಿಚಾರ ಮಂಡಿಸುವ ಶೈಲಿ ಅಮೋಘವಾದುದು. ವಿಚಾರದ ಆಳವಾದ ಪರಿಜ್ಞಾನವಲ್ಲದೆ ಸ್ವತಃ ಅನುಭವವೂ ಇರುವುದರಿಂದ ಕೇಳುಗ ರೈತರಲ್ಲಿ ಯಾವುದೇ ಸಂಶಯಕ್ಕೂ ಎಡೆ ಉಳಿಯುವುದಿಲ್ಲ. ಅಷ್ಟೇ ಅಲ್ಲ ರೈತರ ಜೀವನದಿಂದಲೇ ಹಾಸ್ಯಮಯ ಸನ್ನಿವೇಶಗಳನ್ನೂ, ಅನುಭವದ ಉದಾಹರಣೆಗಳನ್ನೂ ಬಳಸುತ್ತ ಅವರು ವಿಚಾರ ಮಂಡಿಸುವಾಗ, ಇಂಥ ಗಹನವಾದ ವಿಚಾರ 'ಬೋರ್' ಹೊಡೆಸುವುದಿರಲಿ, ಸಮಯ ಸಂದುದೇ ತಿಳಿಯುವುದಿಲ್ಲ. ಜೊತೆಗೆ ಅವರ ಅಪ್ಪಟ ಧಾರವಾಡ ಭಾಷೆಯ ಸೊಗಡು ಕೂಡ ಇಡೀ ಕಾರ್ಯಕ್ರಮಕ್ಕೆ ಒಳ್ಳೆಯ ಮೆರುಗು ನೀಡುತ್ತದೆ.

ಇವರ ಸಂಪರ್ಕ ವಿಳಾಸ: ಶ್ರೀ ಪ್ರದೀಪ್ ತಪಸ್, ಉಪನ್ಯಾಸಕರು, ಗ್ರಾಮಾಭಿವೃದ್ಧಿ ಹಾಗೂ ಸ್ವ ಉದ್ಯೋಗ ತರಬೇತಿ ಸಂಸ್ಥೆ, ವಿದ್ಯಾಗಿರಿ, ಧಾರವಾಡ.

ನೈಸರ್ಗಿಕ ಕೃಷಿ: ಕೆಲವು ಟಿಪ್ಪಣಿಗಳು

(24 12.89ರಂದು ನಡೆದ ನೈಸರ್ಗಿಕ ಕೃಷಿ ವಿಚಾರ ವಿನಿಮಯದ ವರದಿಯಲ್ಲಿ ಕೈಬಿಟ್ಟ ಕೆಲವು ಅಂಶಗಳನ್ನು ಇಲ್ಲಿ ಟಿಪ್ಪಣಿ ಮಾಡಿದೆ. ಇಂಥ ಇನ್ನೂ ಹಲವಾರು ವಿಷಯಗಳು ಇರಬಹುದು. ಒಟ್ಟಾರೆ, ರೈತರಿಗೆ ಇದೊಂದು ಅತ್ಯಂತ ಉಪಯುಕ್ತ ವಿಚಾರ ಸಂಕಿರಣವಾಗಿರುತ್ತದೆ. —ಸಂ.)

ಕಟ್ಟೆ ರೋಗ–ತಂಬಾಕು

ಬೆಳೆಗಳಿಗೆ ಕಟ್ಟೆ ರೋಗವೆಂದರೆ ಮನುಷ್ಯರಿಗೆ ಕ್ಯಾನ್ಸರ್ ಇದ್ದಂತೆ. ತಂಬಾಕು ಕ್ಯಾನ್ಸರ್‌ಗೆ ಮೂಲವಾದಂತೆ ಕಟ್ಟೆ ರೋಗಕ್ಕೂ ಮೂಲ. ತಂಬಾಕು ಸಹಿತ ಜಗಿದು ಉಗಿದ ಎಲೆ ಅಡಿಕೆ ಚರಟದಿಂದ (ತಂಬುಳ) 20 ವರ್ಷಗಳ ಕಾಲ ಕ್ಯಾನ್ಸರ್ ರೋಗಾಣುಗಳು ಉತ್ಪತ್ತಿಯಾಗುತ್ತಿರುತ್ತವೆ.

ಆದ್ದರಿಂದಲೇ ಪಾಶ್ಚಾತ್ಯ ದೇಶಗಳಲ್ಲಿ ರೈತರು ತಮ್ಮ ಜಮೀನಿನೊಳಕ್ಕೆ ಸಿಗರೇಟು, ಹೊಗೆಸೊಪ್ಪು ಮುಂತಾದ ಯಾವುದೇ ರೀತಿಯಿಂದ ತಂಬಾಕಿನ ಸಂಪರ್ಕವಾಗದಂತೆ ಜಾಗ್ರತೆ ವಹಿಸುತ್ತಾರೆ. ಜಮೀನಿಗೆ ಪ್ರವೇಶಿಸುವ ಪ್ರತಿಯೊಬ್ಬರೂ ಪ್ರವೇಶ ದ್ವಾರದಲ್ಲಿಟ್ಟಿರುವ ತಣ್ಣೀರು, ಬಿಸಿ ನೀರು ಮತ್ತು ದನದ ಹಾಲಿನ ಪಾತ್ರೆಗಳಲ್ಲಿ ಕೈ ಅದ್ದಿ ಚೆನ್ನಾಗಿ ತೊಳೆದೇ ಒಳಗೆ ಪ್ರವೇಶಿಸಬೇಕು.

ಭೂಮಿ : ತಾಯಿಯೋ ಸೂಳೆಯೋ!

ಭೂಮಿಯನ್ನು ತಾಯಿಯಂತೆಯೂ ನೋಡಿಕೊಳ್ಳಬಹುದು, ಸೂಳೆಯಂತೆಯೂ ನಡೆಸಿಕೊಳ್ಳಬಹುದು. ಅಷ್ಟು ರಾಸಾಯನಿಕ ಗೊಬ್ಬರ, ಇಷ್ಟು ಕ್ರಿಮಿನಾಶಕ–ಕಳೆ ನಾಶಕಗಳನ್ನು ಸುರಿದು ಒಂದು 10 ವರ್ಷ 'ವಿಪುಲ'ವಾಗಿ ಬೆಳೆ ತೆಗೆದು ಅನಂತರ ಆ ಭೂಮಿಯನ್ನು ಬರಡು ಮಾಡಿಕೊಳ್ಳಬಹುದು (ಸೂಳೆಯಂತೆ). ಅದಿಲ್ಲದೆ, ತಾಯಿಯಂತೆ ನಡೆಸಿಕೊಳ್ಳಬೇಕೆನ್ನುವುದಾದರೆ ಇಂಥ ದಿಢೀರ್ ಪ್ರತಿಫಲದ ಮನೋಭಾವ ಹೋಗಬೇಕು. ಭೂಮಿ ಇವತ್ತಿಗಲ್ಲ, ಇನ್ನು 10 ವರ್ಷಕ್ಕಲ್ಲ, ಯಾವತ್ತೂ ಬಂಡಾಗದಂತೆ ಅದರ ಫಲವತ್ತತೆಯನ್ನು ಕಾಯ್ದುಕೊಳ್ಳಬೇಕು. ಅಂದರೆ ಅದರ ಸಾರ ಮಾತ್ರ ಹೆಚ್ಚಬೇಕು, ಆದರೆ ಅದರೊಳಗಿನ ಕಣ್ಣಿಗೆ ಕಾಣದ ಜೈವಿಕ ಚಟುವಟಿಕೆಗೆ ಧಕ್ಕೆಯಾಗಬಾರದು.

(ಕಾಂಪೋಸ್ಟ್ ಗೊಬ್ಬರ ಮತ್ತು ನೈಸರ್ಗಿಕ ಕ್ರಿಮಿ ನಾಶಕಗಳಿಂದ ಮಾತ್ರ ಈ ಉದ್ದೇಶ ಸಾಧನೆ ಸಾಧ್ಯ.)

(3ನೇ ಪುಟಕ್ಕೆ)

ಪದ್ಯದಂಕಣ

ಬಣ್ಣಗಾರರು

ಪ್ರಗತಿಯ ಹೆಸರಿಗೆ ಕನ್ನಡಿ
ಹಿಡಿಯುವವರು
ಆಗೊಮ್ಮೆ ಈಗೊಮ್ಮೆ
"ಮುನ್ನಡೆಯುಲಿದ್ದೇವೆ" ಎಂದು
ಬಣ್ಣದ ವೇಷದ ಮುಖವಾಡ ಹೊತ್ತು
ಹೊರ ಬರುತ್ತಿದ್ದಾರೆ.

ಇವರು ಸಾಮಾನ್ಯ ವ್ಯಕ್ತಿಗಳಲ್ಲ
ಅವರು ಧರಿಸಿದ ವೇಷ
ನಿಮ್ಮ ಮುಖದ ಅಳತೆಗೆ ಸರಿ
ಯಾಗಿ ಹಿಗ್ಗುವುದು ಕುಗ್ಗುವುದು, ಬಿಗಿ
ಹೊಡೆತಕ್ಕೆ ಜಗ್ಗದು....ಆದರೆ
ಹೊತ್ತಿಗೆ ಸರಿಯಾಗಿ ಸಭ್ಯತೆಯ
ಸೋಗು ಹಾಕುವುದು ! ಕತ್ತಲೆಯಲಿ
ಮಿಂಚಿ ಮೆರೆಯುವುದು !
ದೇಶದ ಉದ್ದಗಲಕ್ಕೂ.

ತನ್ನ ಶಕ್ತ್ಯಾನುಸಾರ ಕೆಲವೊಮ್ಮೆ
ಕಣ್ಣೀರು ಸುರಿಸಿ
ನಗು ಮೋರೆಯಲಿ ಕೈ ಕುಲುಕಿ,
ಮತ್ತೆ ಕಾಲಿನಲಿ ಮೆಟ್ಟಿ
ಬೀಗಿ ಅಟ್ಟಹಾಸ ಬೀರಿ
ಯಕ್ಷರಂಗದ ದಿಟ್ಟ...
ವೇಷಗಾರರಂತೆ ಬೆಳಕಿನ
ಮೋಡಿಯಲಿ ಮೆರೆದು
ಬೀಗುವರು, ವೇಷ ಹೊತ್ತು
ನೋಡಿ!

ಮುಕ್ತ ಮಾರುಕಟ್ಟೆಯಲ್ಲಿ
ಕಟ್ಟಿ ಕಡೆಯ ವ್ಯಾಪಾರ,
ವ್ಯಕ್ತಿ ಗುಣಕ್ಕೆ ಅನುಗುಣವಾಗಿ
ವ್ಯಕ್ತವಾಗುವುವು ಸೋಗಿನ
ಸೊಬಗಿನ ಮುಖವಾಡಗಳು
ಕಡಿತದ ದರದಲ್ಲಿ ಮಾರು
ಕಟ್ಟೆಗೆ ಬಂದಿವೆ. ಅವಶ್ಯ
ವಿದ್ದವರು ತಕ್ಷಣ ಭೇಟಿ ಕೊಡಿ
ಮತ್ತೆ ಸಿಗವು
ಬಣ್ಣಗಾರರ ವೇಷದ
ಮುಖವಾಡಗಳು.

—ದ. ರಾಜಣ್ಣ.

ಅಳಿವು, ಉಳಿವು


ಸತ್ವವಿಲ್ಲದವು
ಕಲ್ಲಿನ ಸುತ್ತ
ಪುಡಿಯಾಗಿ ಉದುರುತ್ತವೆ.
ಸತ್ವವುಳ್ಳವು
ಗೂಟದ ಬುಡದಲಿ
ಗಟ್ಟಿಯಾಗುಳಿಯುತ್ತವೆ.

—'ನಾಸು'

ವಿ'ಚಿತ್ರ'!

ವೀಕ್ಷಕ : ಇದು ಯಾವುದರ ಚಿತ್ರ
ಚಿತ್ರಕಾರ : ಈ ಚಿತ್ರ ಹುಲ್ಲು ಮೇಯುತ್ತಿರುವ ಹಸುವಿನದು.
ವೀಕ್ಷಕ : ಹೌದಾ? ಈ ಚಿತ್ರದಲ್ಲಿ ಹು[illegible] ಇರುವಂತೆ ಕಾಣುತ್ತಿಲ್ಲವ[illegible]
ಚಿತ್ರಕಾರ : ಹುಲ್ಲನ್ನು ಹಸು ತಿಂದು ಹಾ[illegible]
ವೀಕ್ಷಕ : ಮತ್ತೆ ಹಸುವಿನ ಚಿತ್ರ[illegible] ಕಾಣುತ್ತಿಲ್ಲವಲ್ಲಾ?
ಚಿತ್ರಕಾರ : ಹುಲ್ಲು ತಿಂದ ಮೇಲೆ [illegible] ವಿಗೆ ಅಲ್ಲೇನು ಕೆಲ್ಸ? [illegible] ಅಲ್ಲಿಂದ ಹೊರಟುಹೋ[illegible]

(ಸಂಗ್ರಹ) ಬಿ. ವಿ. ಕುಮಾ[illegible]



ಹೊಸ ವರುಷ

ಹೊಸ ವರುಷ ಬಂದಿತು
ಹೊಸ ಹರುಷ ತಂದಿತು
ಹೊಸ ಉತ್ಸಾಹ ಹೊಸ ಚೇತನ
ನಮಗೆಲ್ಲ ಮೂಡಿತು.

ಕವಿಗಳಿಗೆ ಹೊಸ ಚೇತನ ತಂದಿತು
ಕಲಾವಿದರಿಗೆ ಹೊಸ ಉತ್ಸಾಹ ತಂದಿತು
ವಿಜ್ಞಾನಿಗಳಿಗೆ ಹೊಸ ಆಕರ್ಷಣೆ ತಂದಿತು
ಹೊಸ ಋತುಮಾನ ಹತ್ತಿರ ತಂದಿತು.

[illegible]ಸ ವರುಷ ಬಂದಿತು
ಆಸೆ ತಂದಿತು.

—ಎಚ್. ಸಿ. ರಾಮಸ್ವಾಮಿ,
ಹಾಲು, ತೂರು.

ಅಪಾಯದಿಂದ ಪಾರಾಗಿಸಿತು ಬುದ್ಧಿವಂತಿಕೆ

ಒಂದು ಊರಿನಲ್ಲಿ ನಾಲ್ವರು ಗೆಳೆಯರಿದ್ದರು. ಅವರು ದಿನವೂ ಸಂಜೆಯಲ್ಲಿ ವಿನೋದಕ್ಕಾಗಿ ತಿರುಗಾಡುತ್ತಿದ್ದರು.

ಒಂದು ದಿನ ಒಂದು ಕಾಡಿನ ದಾರಿಯಲ್ಲಿ ಹೋಗುತ್ತಿದ್ದಾಗ, ದಾರಿಯ ಪಕ್ಕದಲ್ಲಿದ್ದ ಗುಹೆಯೊಂದರಿಂದ ದೊಡ್ಡ ಶಬ್ದವಾಯಿತು. ಇದನ್ನು ಕೇಳಿ ಗೆಳೆಯರಿಗೆ ಭಯವಾಯಿತು. ಆದರೂ ಅವರು ಧೈರ್ಯ ತಂದುಕೊಂಡು, "ಯಾರದು?" ಎಂದು ಕೇಳಿದರು.

"ನಾನು ಭೂತ. ನಿಮ್ಮನ್ನು ತಿಂದು ಬಿಡುತ್ತೇನೆ. ಹಹ್ಹಹ್ಹಾ...." ಎಂದು ಅಬ್ಬರಿಸಿತು.

ಇದನ್ನು ಕೇಳಿ ಹುಡುಗರಿಗೆ ಜೀವವೇ ಹಾರಿಹೋದಂತಾಯಿತು. ಆದರೆ ಅವರಲ್ಲೊಬ್ಬ ಬುದ್ಧಿವಂತ. ಅವನು ಒಂದು ಕ್ಷಣ ಯೋಚಿಸಿ, "ನೀನು ಭೂತವೆ? ನಿನ್ನ ಹತ್ತಿರ ಯಾವ ಮಂತ್ರವೂ ಇಲ್ಲ, ತಂತ್ರವೂ ಇಲ್ಲ. ನೀನು ನಮ್ಮನ್ನೇನು ಮಾಡೀಯೆ?" ಎಂದನು

ಅದನ್ನು ಕೇಳಿದ ಭೂತ, "ನಿನ್ನ ಹತ್ತಿರ ಮಂತ್ರ-ತಂತ್ರ ಏನಾದರೂ ಇದೆಯೆ?" ಎಂದು ಕೇಳಿತು.

ಅದಕ್ಕೆ ಅವನು, "ನನ್ನ ಹತ್ತಿರ ಒಂದು ಮಂತ್ರದ ಕೋಲಿದೆ. ಅದನ್ನು ಯಾರಿಗಾದರೂ ತಾಗಿಸಿದರೆ ಅವರು ಸಾಯುತ್ತಾರೆ. ನನ್ನ ತಲೆಯೇ ಒಂದು ತಂತ್ರ. ಯಾರಾದರೂ ನನ್ನ ತಲೆಯನ್ನು ಮುಟ್ಟಿದರೆ ಸಿಡಿದು ಚೂರಾಗುತ್ತಾರೆ" ಎಂದನು.

ಇದನ್ನು ಕೇಳಿ ಭೂತ ಹೆದರಿ ಮಾಯವಾಯಿತು. ಅಪಾಯದಿಂದ ಉಪಾಯವಾಗಿ ಪಾರಾದ ಗೆಳೆಯರು ಕೂಡಲೇ ಊರು ಸೇರಿಕೊಂಡರು.

—ಪಿ. ನಾಗರಾಜ.
ಎಂಟನೇ ತರಗತಿ,
ನಾರ್ವೆ ಪ್ರೌಢಶಾಲೆ.

ಓದುಗರ ಪತ್ರಗಳು

ಅಭಿನಂದನೆ

ಮಾನ್ಯರೆ,

ಕೊಪ್ಪ ಚಿಕ್ಕಮಗಳೂರು ರಸ್ತೆಯ ಹುಲುಮಕ್ಕಿಯಲ್ಲಿ ವಾಸವಿರುವ ಅಂಗವಿಕಲ ವೃದ್ಧ ಸತ್ಯನಾರಾಯಣ ಭಟ್ಟರ ಮನೆ ಸರಿಯಾದ ದುರಸ್ತಿಯಿಲ್ಲದೆ ದಿಢೀರನೆ ಕುಸಿದು ನೆಲಸಮವಾಗಿತ್ತು. ಇದರ ರಿಪೇರಿಗೆ ಸಂಬಂಧಪಟ್ಟವರೆಲ್ಲರಲ್ಲೂ ನೆರವು ಕೇಳಿದರೂ ದೊರೆಯದಿದ್ದಾಗ, ಸಮೀಪದ ಕಳಸಾಪುರ ಎಸ್ಟೇಟಿನ ಖುಲಾಸೊ ಸೋದರರು ಇದನ್ನು ನೋಡಿದೊಡನೆಯೇ ಇತ್ತ ಗಮನ ಹರಿಸಿ, ತಮ್ಮ ಗೆಳೆಯರೊಂದಿಗೆ ಮನೆಯನ್ನು ಪೂರ್ತಿಯಾಗಿ ಕಟ್ಟಿಸಿಕೊಟ್ಟು, ಭಟ್ಟರಿಗೆ ನೆರಳು ನೀಡಿದ್ದಾರೆ.

('ಮುಂಜಾವು' 7-1-90)

ಇದಕ್ಕಾಗಿ ಖುಲಾಸೋ ಸಹೋದರರಿಗೂ ಅವರ ಗೆಳೆಯರಿಗೂ ಅಭಿನಂದನೆಗಳು.

—ಸುಧಾಕರ, ಹುಲುಮಕ್ಕಿ.

ಕೆಸವೆ ರಸ್ತೆಗೆ ಟಾರು : ಕೃತಜ್ಞತೆ ಮತ್ತು ಅರಿಕೆ

ಮಾನ್ಯರೆ,

ಕೊಪ್ಪ-ಕೆಸವೆ ರಸ್ತೆಯನ್ನು ಹಂತ ಹಂತವಾಗಿ ಪೂರ್ತಿ ಟಾರು ಹಾಕಿಸುವುದಾಗಿ 1985ರಲ್ಲಿ ಈ ರಸ್ತೆಯ ಮುಸುರೆ ಹಳ್ಳದ ಸೇತುವೆ ಉದ್ಘಾಟನೆಗೆ ಬಂದಿದ್ದ ಸಚಿವ ಎಚ್. ಡಿ ದೇವೇಗೌಡರು ಭರವಸೆ ಕೊಟ್ಟಿದ್ದರು. ಆದರೆ ಕೇವಲ 1 ಕಿ.ಮೀ. ರಸ್ತೆಗೆ ಟಾರು ಆಯಿತೇ ಹೊರತು, ಅನಂತರ ನಿಮ್ಮ ಪತ್ರಿಕೆಯ ಮೂಲಕ ಸಂಬಂಧಪಟ್ಟವರಿಗೆಲ್ಲ ಪದೇ ಪದೇ ಜ್ಞಾಪಿಸಿದ್ದಲ್ಲದೆ, ಅಧಿಕಾರಿಗಳ ಮೂಲಕವೂ ಕೋರಿಕೊಳ್ಳುತ್ತಿದ್ದರೂ ಕಾಮಗಾರಿ ಮಾತ್ರ ಮುಂದುವರಿಯಲೇ ಇಲ್ಲ.

ಇದೀಗ ನೂತನ ಶಾಸಕ ಯು. ಕೆ. ಶಾಮಣ್ಣನವರ ಮೊದಲ ತಾ. ಪಂ. ಸಮಿತಿ ಸಭೆಯಲ್ಲಿ ಈ ವಿಷಯ ಪ್ರಸ್ತಾಪ ಮಾಡಿದಾಗ, ಅವರು ಕೂಡಲೇ ಸಂಬಂಧಪಟ್ಟ ಇಲಾಖೆಗೂ ಗುತ್ತಿಗೆದಾರರಿಗೂ ತಗಾದೆ ಮಾಡಿದ್ದಲ್ಲದೆ, ಜ. ಪ. ಸದಸ್ಯೆಯವರ ಮೂಲಕ ಜಿಲ್ಲಾ ಪರಿಷತ್ತಿನಿಂದ ಹಣವನ್ನೂ ಮಂಜೂರು ಮಾಡಿಸಿದ್ದಾರೆ. ಅವರುಗಳಿಗೆ ಗ್ರಾಮಸ್ಥರು ಕೃತಜ್ಞತೆ ಸಲ್ಲಿಸುತ್ತೇವೆ.

ಇದೇ ರಸ್ತೆಯು 5ನೇ ಕಿ. ಮೀ. ನ ಹೊಸ ಬಸ್ ಸ್ಟಾಪ್‌ನಿಂದ ಕೆಸವೆ ಫ್ಯಾಕ್ಟರಿ ವರೆಗಿನ ರಸ್ತೆ ಪೂರ್ಣ ಹಾಳಾಗಿದೆ.

(4ನೇ ಪುಟಕ್ಕೆ)

ಡಿ.ಡಿ.ಟಿ.ಸಿಂಪಡಣೆಕೂಡಲೇ ಪುನರಾರಂಭಿಸಿ

ಮಾನ್ಯರೆ,

ಈಗ ಎರಡು ವರುಷದ ಹಿಂದೆ ಕೊಪ್ಪದಲ್ಲಿ ಡಿ. ಡಿ. ಟಿ. ಸಿಂಪಡಿಸುವ ಮಂದಿ ಮನೆ-ಮನೆಗೆ ಹೋಗಿ ಡಿ. ಡಿ. ಟಿ. ಸಿಂಪಡಣಾ ಕಾರ್ಯ ಮಾಡುತ್ತಿದ್ದರು. ಅದರಿಂದ ಸ್ವಲ್ಪ ಮಟ್ಟಿಗೆ ಸೊಳ್ಳೆಗಳ ನಿಯಂತ್ರಣವಾಗುತ್ತಿತ್ತು.

ಆದರೆ ಈ ಎರಡು ವರುಷದಿಂದ ಡಿ.ಡಿ.ಟಿ. ಸಿಂಪಡಣಾ ಕಾರ್ಯವನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಹೀಗಾಗಿ ಸೊಳ್ಳೆಗಳ ಕಾಟ ಬಹಳ ಜಾಸ್ತಿಯಾಗಿದೆ. ಹೀಗೆ ಡಿ. ಡಿ. ಟಿ. ಸಿಂಪಡಣಾ ಕಾರ್ಯವನ್ನು ನಿಲ್ಲಿಸಿಯೇ ಬಿಟ್ಟಲ್ಲಿ ಸುಮಾರು ವರುಷಗಳ ಹಿಂದೆ ಈ ಮಲೆನಾಡಿನಲ್ಲಿ ಬೇರೂರಿದ್ದ ಮಲೇರಿಯಾ ರೋಗ

(4ನೇ ಪುಟಕ್ಕೆ)

ಕೃತಜ್ಞತೆ

ಮಾನ್ಯರೆ,

ಕೊಪ್ಪದ ಬಾಳಗಡಿ ಮತ್ತು ಸುತ್ತಮುತ್ತಲ ಪ್ರಯಾಣಿಕರ ಅನುಕೂಲಕ್ಕಾಗಿ, ಸಾರ್ವಜನಿಕರ ಮನವಿಯ ಮೇರೆಗೆ ಶೀಘ್ರ ಕ್ರಮ ಕೈಗೊಂಡು ಬಾಳಗಡಿಯಲ್ಲಿ ಒಂದು ಬಸ್ ಸ್ಟಾಪ್ ಕಟ್ಟಿಸಿರುವುದಕ್ಕಾಗಿ ಮಂಡಲ ಪ್ರಧಾನರು, ಸದಸ್ಯರು ಕಾರ್ಯದರ್ಶಿಗಳು ಇವರಿಗೆಲ್ಲ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತ, ಮುಂದೆಯೂ ಮಂಡಲ ಪಂಚಾಯ್ತಿಯಿಂದ ಉತ್ತಮ ರೀತಿಯ ಜನಹಿತ ಕಾರ್ಯಗಳು ನಡೆಯಲೆಂದು ಆಶಿಸುತ್ತೇವೆ.

— ಗ್ರಾಮಸ್ಥರು, ಬಾಳಗಡಿ.
(38 ಜನರ ಸಹಿಗಳಿವೆ.)

ಆದಾಯ ವೃದ್ಧೀಕರಣ : ಬಡ ವಿದ್ಯಾರ್ಥಿಗಳಿಗೆ ಅನ್ಯಾಯ

ಮಾನ್ಯರೆ,

ಕೇವಲ 3600 ರೂ. ವಾರ್ಷಿಕ ಆದಾಯವಿದ್ದವರು ಒಂದು ಹೊತ್ತಿನ ಕೂಳು ತಿನ್ನುವುದೂ ಕಷ್ಟವಾಗಿರುವ ಪ್ರಸ್ತುತ ದಿನಗಳಲ್ಲಿ ಕೂಡ ಸರ್ಕಾರ ಕನಿಷ್ಠ ಆದಾಯವೆಂದು ರೂ. 3600ನ್ನು ಗೊತ್ತುಪಡಿಸಿರುವುದು ಒಂದು ಕುಚೋದ್ಯದ ಸಂಗತಿಯೇ ಸರಿ. ಆದರೆ ಬಡ ಮತ್ತು ಕೆಳಮಧ್ಯಮ

(4ನೇ ಪುಟಕ್ಕೆ)

ನೈಸರ್ಗಿಕ ಕೃಷಿ: ಕೆಲವು ಟಿಪ್ಪಣಿಗಳು

(2ನೇ ಪುಟದಿಂದ)

'ಉಪ ಜೀವಿ' ಬೆಳೆ

ನಾವು ಬಿತ್ತಿದ ಅಥವಾ ನೆಟ್ಟ ಬೆಳೆಗಳ ನ್ನಾಶ್ರಯಿಸಿ ಅವುಗಳ ನಡುವೆ ಬೆಳೆಯುವ ಹಲವು ಬಗೆಯ ಕಳೆಗಳು ನಮ್ಮ ಬೆಳೆಗಳ ಹಲವಾರು ಅಗತ್ಯಗಳನ್ನು ಪೂರೈಸುತ್ತವೆ. ಹಲವು ಕಳೆಗಳು ಕೆಲ ಬಗೆಯ ಅಪರೂಪದ ಸತ್ವಗಳನ್ನು ನೆಲದಾಳದಿಂದ ಹೀರಿಯೋ, ತಾವೇ ತಯಾರಿಸಿಯೋ ಗಿಡಗಳ ಬೇರುಗಳಿಗೆ ಒದಗಿಸುವುದು. ಇನ್ನು ಕೆಲವು ಕಳೆಗಳು ರೋಗ ನಿರೋಧಕ ಶಕ್ತಿಯನ್ನು ಅಥವಾ 'ಔಷಧ'ಗಳನ್ನು ಬೆಳೆಗಳ ಬೇರುಗಳಿಗೆ 'ಇಂಜೆಕ್ಟ್' ಮಾಡುತ್ತವೆ. ಆದ್ದರಿಂದ, ಆಯಾ ಕಳೆಗಳ ಗುಣ - ದೋಷಗಳನ್ನರಿಯದೆ, ಎಲ್ಲಾ ಕಳೆಗಳನ್ನೂ ಸಾರಾಸಗಟಾಗಿ ನಿರ್ಮೂಲ ಮಾಡಬಾರದು.

ಇದಲ್ಲದೆ, ಬೆಳೆಗಳ ನಡುವೆ ಕೆಲವು ಉಪ ಬೆಳೆಗಳನ್ನು ನೆಟ್ಟರೆ ಅದರಿಂದ ಬೆಳೆಯು ಹಲವು ರೋಗಗಳು, ಕ್ರಿಮಿ-ಕೀಟ ಬಾಧೆಗಳು ತಪ್ಪುತ್ತವೆ. ಉದಾಹರಣೆಗೆ 10 ಬದನೆ ಗಿಡಗಳ ನಡುವೆ ಒಂದು ಟೊಮ್ಯಾಟೊ ಗಿಡ ನೆಟ್ಟರೆ ಅದರ ಎಲೆಗಳ ವಾಸನೆಗೆ, ಬದನೆಗೆ ಬೀಳುವ ಹುಳ ದೂರವಾಗುತ್ತದೆ. ಹಾಗೆಯೇ, 10 ಟೊಮ್ಯಾಟೋ ಗಿಡಗಳ ನಡುವೆ ಒಂದು ಬೆಳ್ಳುಳ್ಳಿ ನೆಟ್ಟರೆ ಟೊಮ್ಯಾಟೋಕ್ಕೆ ಹುಳ ಬೀಳುವುದಿಲ್ಲ. ಇತ್ಯಾದಿ ●

ಕೃತಜ್ಞತೆ

ಕೊಪ್ಪ : ಡಿಸೆಂಬರ್ 29, 30, 31 ರಂದು ಹರಿಹರಪುರದಲ್ಲಿ ನಡೆದ ತಾ|| ಯುವ ಜನ ಮೇಳದ ಯಶಸ್ಸಿಗೆ ಸಹಕರಿಸಿದ ಪ್ರತಿಯೊಬ್ಬರಿಗೂ ಕೊಪ್ಪ ತಾ|| ಯುವಜನ ಒಕ್ಕೂಟದ ಅಧ್ಯಕ್ಷ ಎಸ್. ಎನ್. ರಾಮಸ್ವಾಮಿ ಮತ್ತು ಕಾರ್ಯದರ್ಶಿ ಓ.ಡಿ. ರತ್ನಾಕರ್ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

ಸ್ನೇಹ ಸಂಗಮ ಕ್ರಿಕೆಟ್ : ಬಾಳೆಹೊನ್ನೂರಿಗೆ ಪ್ರಶಸ್ತಿ

ಹರಿಹರಪುರ: ಡಿ. 23ರಿಂದ 31ರವರೆಗೆ ಇಲ್ಲಿ ನಡೆದ ಇಲ್ಲಿನ ಸ್ನೇಹ ಸಂಗಮ ಅಸೋಸಿಯೇಶನ್ ಆಶ್ರಯದ 3ನೇ ವರ್ಷದ ಆಹ್ವಾನ ಕ್ರಿಕೆಟ್ ಟೂರ್ನಿಯಲ್ಲಿ ಬಾಳೆಹೊನ್ನೂರು ತಂಡ ಮೊದಲ ಸ್ಥಾನವನ್ನೂ, ಶೃಂಗೇರಿಯ ಶಾರದಾ ಕ್ರಿಕೆಟ್ ಕ್ಲಬ್ 2ನೇ ಸ್ಥಾನವನ್ನೂ ಗಳಿಸಿದವು. ಬಾಳೆಹೊನ್ನೂರಿನ ರಫೀಕ್ ಅಹಮದ್ ಪಂದ್ಯಾವಳಿಯ ಅತ್ಯುತ್ತಮ ಬ್ಯಾಟ್ಸ್‌ಮನ್ ಎಂದೂ, ತೀರ್ಥಹಳ್ಳಿ ಸಿಟಿ ಕ್ಲಬ್‌ನ ರಮೇಶ್ ಅತ್ಯುತ್ತಮ ಬೌಲರ್ ಎಂದೂ ಆಯ್ಕೆಯಾದರು.

ಕೂಟದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಸ್ನೇಹ ಸಂಗಮ ಕೃತಜ್ಞತೆ ಸಲ್ಲಿಸಿದೆ.

ಪೋಷಕ, ಬೋಧಕರ ಸಭೆ

ಆಗಳಗಂಡಿ : ಇಲ್ಲಿನ ಸ|| ಪ್ರೌಢಶಾಲೆಯಲ್ಲಿ ಡಿ 30ರಂದು ಕೆರೆಮನೆ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಪೋಷಕ-ಬೋಧಕರ ಸಭೆ ನಡೆಯಿತು. ಹಾಲಪ್ಪ ಗೌಡ, ವೆಂಕಟೇಶರಾವ್, ರಾಮಣ್ಣ ಹೆಗ್ಡೆ ಎಚ್. ಟಿ. ರತ್ನಾಕರ್ ಮುಖ್ಯ ಅತಿಥಿಗಳಾಗಿದ್ದರು.

ಮುಖ್ಯೋಪಾಧ್ಯಾಯರಾದ ರಾಮಚಂದ್ರ ಭಟ್ ಸ್ವಾಗತಿಸಿ ವಂದಿಸಿದರು.

(ವರದಿ : ಎಂ. ಕೆ. ಸೂರ್ಯಪ್ರಭ)

ಅಡಿಕೆ ಬೆಳೆಗಾರರಿಗೆ ಪರಿಹಾರದ ಭರವಸೆ

ಶೃಂಗೇರಿ: ಕಳೆದ ಮಳೆಗಾಲದ ಬಿರುಗಾಳಿಯಿಂದ ವಿಪರೀತ ನಷ್ಟಕ್ಕೊಳಗಾಗಿರುವ ಅಡಿಕೆ ಬೆಳೆಗಾರರ ಪರಿಸ್ಥಿತಿಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ತರಿಸಿಕೊಂಡು ಮಾನವೀಯತೆಯಿಂದ ಪರಿಹಾರದ ವ್ಯವಸ್ಥೆಗೆ ಯತ್ನಿಸುವುದಾಗಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಶೃಂಗೇರಿ ತಾ|| ಅಡಿಕೆ ಬೆಳೆಗಾರರ ಸಂಘದ ನಿಯೋಗಕ್ಕೆ ಭರವಸೆ ನೀಡಿದ್ದಾರೆ.

ಜಿ.ಪ. ಸದಸ್ಯ ಕೆ. ವಿ. ರಾಮಪ್ಪಯ್ಯ ಅವರ ನೇತೃತ್ವದಲ್ಲಿ ಡಿ. 21ರಂದು ಬೆಂಗಳೂರಿಗೆ ತೆರಳಿದ್ದ ನಿಯೋಗವನ್ನು ಮುಖ್ಯಮಂತ್ರಿಗಳಿಗೆ ಭೇಟಿ ಮಾಡಿಸಿದ ಶಾಸಕ ಶಾಮಣ್ಣ, ಬೆಳೆಗಾರರ ಅಹವಾಲು-ಬೇಡಿಕೆಗಳನ್ನು ಮುಖ್ಯಮಂತ್ರಿಗಳಿಗೆ ವಿವರಿಸಿದರು.

ಶಾಮಣ್ಣ ಅವರಿಗೆ ಮಂತ್ರಿ ಪದವಿ ನೀಡು ನಂತೆಯೂ ನಿಯೋಗ ಮುಖ್ಯ ಮಂತ್ರಿಗಳನ್ನು ವಿನಂತಿಸಿತು.

ಪೇಟೆ ಧಾರಣೆ

'ಅಡಿಕೆ

ಶಿವಮೊಗ್ಗ : 12-1-1990
ಸರಕು : 3400-3900
ಬೆಟ್ಟೆ : 2100-2510
ಗೊರಬಲು : 1910-2020

ಸಾಗರ : 12.1.1990
ಇಡಿ : 2560-2746
ಚಾಲಿ : 2550-2740
ರಾಶಿ : 3925-4130
ಸಿಪ್ಪೆ ಗೋಟು : 1070-1250

ಏಲಕ್ಕಿ

ಕೊಪ್ಪ : 13-1-1990
ರಾಶಿ : 280-310
ಜರಡಿ : 310-325
ಆರಿಸಿದ್ದು : 380-415

(ಕಳೆದ ವಾರಕ್ಕಿಂತ ಮಾಲು ಹೆಚ್ಚಿಗೆ ಬಂದಿರುವುದರಿಂದ ಹಾಗೂ ಹಣ ಕಾಸಿನ ಬಿಗಿಯಿಂದ ಧಾರಣೆ 20 ರೂ. ಗಳಷ್ಟು ಇಳಿದಿದೆ. ಬಹುಶಃ ಇನ್ನೊಂದು ತಿಂಗಳ ನಂತರ ಧಾರಣೆ ಗಮನಾರ್ಹವಾಗಿ ಏರಬಹುದೆಂದು ಏಲಕ್ಕಿ ಮಾರಾಟ ನಿಗಮದ ಅಧಿಕಾರಿಗಳ ನಿರೀಕ್ಷೆ.)

ವಿವಿಧ ಸ್ಪರ್ಧೆಗಳಿಗೆ ಆಹ್ವಾನ

ಗಣರಾಜ್ಯೋತ್ಸವ ಸೈಕಲ್ ಸ್ಪರ್ಧೆ

ಕೊಪ್ಪದಲ್ಲಿ ಗಣರಾಜ್ಯೋತ್ಸವ ಸಮಿತಿ ಆಶ್ರಯದಲ್ಲಿ ಸಾರ್ವಜನಿಕರಿಗಾಗಿ ತಾ|| ಮಟ್ಟದ 20 ಕಿ ಮಿ ಸೈಕಲ್ ಸ್ಪರ್ಧೆ ತಾ|| 22-1-90. ಹೆಸರು ನೋಂದಾಯಿಸಲು ಕಡೇ ದಿನಾಂಕ 19-1-90 ವಿಳಾಸ : ಎಚ್. ಎ. ಗೋಪಾಲ್, ದೈ. ಶಿ. ಶಿಕ್ಷಕರು, ಕಿರಿಯ ಕಾಲೇಜು, ಕೊಪ್ಪ ಅಥವಾ ಸ| ಶಿಕ್ಷಣಾಧಿಕಾರಿಗಳು, ಕೊಪ್ಪ.

ಹಿ. ಪ್ರಾ. ಶಾಲೆ, ಪ್ರೌಢಶಾಲೆ ಕಾಲೇಜು ವಿದ್ಯಾರ್ಥಿಗಳಿಗೆ

ಹಿ. ಪ್ರಾ. ಶಾಲೆಗಳಿಗೆ ಕಬಡ್ಡಿ, ರಂಗೋಲಿ, ಜ್ಞಾಪಕಶಕ್ತಿ, ದೇಶ ಭಕ್ತಿ ಗೀತೆ; ಪ್ರೌಢ ಶಾಲೆಗೆ ವಾಲಿಬಾಲ್, ರಂಗೋಲಿ, ದೇಶ ಭಕ್ತಿ ಗೀತೆ ಮತ್ತು ರಸ ಪ್ರಶ್ನೆ ; ಕಾಲೇಜುಗಳಿಗೆ ದೇಶ ಭಕ್ತಿ ಗೀತೆ-20-1-90 : ಕಾನ್ವೆಂಟ್ ಪ್ರೌಢ ಶಾಲೆ.

26 ರಂದು ಬೆಳಗ್ಗೆ ಧ್ವಜಾರೋಹಣ, ಸಾಮೂಹಿಕ ಕವಾಯತು, ಸಂಜೆ 6ರಿಂದ ಮನರಂಜನಾ ಕಾರ್ಯಕ್ರಮ, ಕಂದೀಲು ವ್ಯಾಯಾಮ ಪ್ರದರ್ಶನ.

ವಾಲಿಬಾಲ್ ಟೂರ್ನಿ

ತೆಂಗಿನಮನೆ: ಲಕ್ಕಿ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ಚಿಕ್ಕಮಗಳೂರು, ಶಿವಮೊಗ್ಗ ಅಂತರ ಜಿಲ್ಲಾ ಮಟ್ಟದ ಪುರುಷರ ಮತ್ತು ಮಹಿಳೆಯರ ಮುಕ್ತ ವಾಲಿಬಾಲ್ ಪಂದ್ಯಾವಳಿ ಸ್ಥಾರ್ ಕ್ರೀಡಾಂಗಣ—28.1.90. ಪ್ರವೇಶ ಧನ 25 ರೂ., ಪ್ರವೇಶಕ್ಕೆ ಕೊನೆ ದಿನಾಂಕ 26.1.90. ವಿಳಾಸ : ಎಂ. ಕೆ. ಮಹಮ್ಮದ್, ತೆಂಗಿನಮನೆ, ಕಲ್ಕೆರೆ ಅಂಚೆ ಕೊಪ್ಪ ತಾ||

ಪುರುಷರ ಹೊನಲು ಬೆಳಕಿನ ಷಟಲ್ ಬ್ಯಾಡ್‌ಮಿಂಟನ್

ಜಯಪುರ : ದಿ|| ಕೌಳಿ ಚನ್ನಪ್ಪ ಗೌಡ ಸ್ಮಾರಕ 2ನೇ ವರ್ಷದ ಚಿಕ್ಕಮಗಳೂರು ಜಿಲ್ಲಾ ಮಟ್ಟದ ಪಂದ್ಯಾವಳಿ 2-2-90 ಮತ್ತು 3 2 90. ತಂಡಗಳಿಗೆ ಪ್ರವೇಶ ಧನ 35 ರೂ. ಕೊನೇ ದಿನ 27-1-90. ವಿಳಾಸ: ಮಲೆನಾಡು ಸ್ಪೋರ್ಟ್ಸ್ ಕ್ಲಬ್, ಜಯಪುರ. 4 ಬಹುಮಾನ ಮತ್ತು ಸಮಾಧಾನ ಬಹುಮಾನಗಳು. ಪ್ರಾಯೋಜಕರು: ಕೌಳಿ ರಾಮಪ್ಪಗೌಡರು.

ಆದಾಯ ಪತ್ರ ಬಡ ವಿದ್ಯಾರ್ಥಿಗಳಿಗೆ ಅನ್ಯಾಯ

(3ನೇ ಪುಟದಿಂದ)

ವರ್ಗದವರ ಕಡಿಮೆ ಆದಾಯವನ್ನು ರೂ. 3600 ಅಥವಾ ಅದಕ್ಕಿಂತ ಕಡಿಮೆ ಎಂದು ಗುರುತಿಸುವುದು ಎಲ್ಲಾ ಕಡೆಯಲ್ಲೂ ನಡೆದು ಬರುತ್ತಿರುವ ಒಂದು 'ಸಂಪ್ರದಾಯ'.

ಆದರೆ ಈ ಬಾರಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಆಘಾತವಾಗುವಂತೆ ಇಲ್ಲಿನ ಅಧಿಕಾರಿಗಳು ಮನಬಂದಂತೆ ವರ್ತಿಸಿ ಅನ್ಯಾಯ ಮಾಡಿದ್ದಾರೆ. ಹಾಗೂ ಪ್ರತಿ ವರ್ಷದಂತೆಯೇ ಈ ವರ್ಷವೂ ಶುಲ್ಕ ವಿನಾಯ್ತಿ ಅಥವಾ ರಿಯಾಯ್ತಿ ಉಂಟೆಂದು ಕಾಲೇಜು ಸೇರಿದ ಹಲವಾರು ವಿದ್ಯಾರ್ಥಿಗಳನ್ನು ಪೇಚಿಗೆ ಸಿಕ್ಕಿಸಿದ್ದಾರೆ. ಬಡ ವಿದ್ಯಾರ್ಥಿಗಳ ಆದಾಯವನ್ನು ಏರಿಸಿರುವ ಅಧಿಕಾರಿಗಳು ಬಹುಶಃ 'ಬ್ಯಾಲೆನ್ಸ್' ಕಾಪಾಡಲಿಕ್ಕೆಂದು (!) ಲಕ್ಷಾಧಿಪತಿಗಳ ಮಕ್ಕಳ ಆದಾಯವನ್ನು ರೂ. 3600 ಎಂದು ಬರೆದು ಕೊಟ್ಟು ತಮ್ಮ ಪ್ರಾಮಾಣಿಕತೆ ಮೆರೆದಿದ್ದಾರೆ!

ವಿದ್ಯಾರ್ಥಿಗಳು ತಮಗಾಗಿರುವ ಅನ್ಯಾಯವನ್ನು ಸ್ಥಳೀಯ ತಹಶೀಲ್ದಾರರಿಗೆ ಹೇಳಿಕೊಂಡಾಗ, 'ಅರ್ಜಿ ಕೊಡಿ' ಎಂದು ಹೇಳಿದ್ದರು. ಆದರೆ ಯಾವ ರೀತಿಯಲ್ಲಿ ಪರಿಶೀಲನೆ ಮಾಡಿದರೋ ತಿಳಿಯದು, ಅಂತೂ ಮರು ದಿನವೇ ಎಲ್ಲಾ ವಿದ್ಯಾರ್ಥಿಗಳಿಗೂ 'ಆದಾಯ ಸರ್ಟಿಫಿಕೇಟ್ ಸರಿಯಿದೆಯೆಂದು ತಿಳುವಳಿಕೆ ಪತ್ರ ಕಳುಹಿಸಿದ್ದಾರೆ. ಕೆಲವು ವಿದ್ಯಾರ್ಥಿಗಳು ಇಲ್ಲಿನ ಗುಮಾಸ್ತರುಗಳ ಭ್ರಷ್ಟತೆಗೆ ಹೆದರಿ ಸುಮ್ಮನೆ ಫೀ ಕಟ್ಟಿದರೆ, ಇನ್ನು ಕೆಲವರು ತಾಲ್ಲೂಕ್ ಕಛೇರಿ ಸುತ್ತಿ ಸುತ್ತಿ ಸುಸ್ತಾಗಿದ್ದಾರೆ.

ಸದ್ಯಕ್ಕೆ ಪ್ರಾಮಾಣಿಕರೆಂದು ಹೆಸರು ಪಡೆದಿರುವ ತಹಶೀಲ್ದಾರ್‌ರವರು. ಈ ಬಗ್ಗೆ ಸರಿಯಾದ ತನಿಖೆ ನಡೆಸಿ ಬಡ ವಿದ್ಯಾರ್ಥಿಗಳಿಗಾಗಿರುವ ಅನ್ಯಾಯವನ್ನು ಸರಿಪಡಿಸುವರೆಂದು ನಂಬೋಣವೆ? ಅಲ್ಲದೆ ಭಾರೀ ಶ್ರೀಮಂತರ ಆದಾಯವನ್ನು 'ಕಡಿಮೆಗೊಳಿಸುವಲ್ಲಿ' ಹಣ ನುಂಗಿದವರ ಭ್ರಷ್ಟತೆಯನ್ನೂ ಬಯಲಿಗೆಳೆದು, ಅವರ ಮೇಲೆ ಕ್ರಮ ಕೈಗೊಳ್ಳುವಷ್ಟು ಧೈರ್ಯ ತೋರಿಸಿಯಾರೆ?

—'ಶೃಂಗ', ಶೃಂಗೇರಿ.

ಡಿಡಿಟಿ ಸಿಂಪರಣೆ ಪುನರಾರಂಭಿಸಿ

(2ನೇ ಪುಟದಿಂದ)

ಪುನಃ ಬರುವ ಸಾಧ್ಯತೆ ತಳ್ಳಿಹಾಕುವಂತಿಲ್ಲ.

ಆದ ಕಾರಣ ದಯವಿಟ್ಟು ಸಂಬಂಧಪಟ್ಟವರು ಈ ಕೂಡಲೇ ಕ್ರಮಕೈಗೊಂಡು ಡಿ. ಡಿ. ಟಿ. ಸಿಂಪಡಣಾ ಕಾರ್ಯವನ್ನು ಪುನಃ ಪ್ರಾರಂಭಿಸಿ, ಮುಂದೆ ಆಗುವ ಅನಾಹುತವನ್ನು ತಪ್ಪಿಸಬೇಕಾಗಿ ಕೋರುವೆ.

—ಆಲ್‌ಫ್ರೆಡ್ ಡಿ'ಸೋಜಾ, ಬಾಳಗಡಿ ರಸ್ತೆ, ಕೊಪ್ಪ

ಕೆಸವೆ ರಸ್ತೆಗೆ ಟಾರು

(3ನೇ ಪುಟದಿಂದ)

ಶುರ್ತಾಗಿ ಈ ಭಾಗಕ್ಕೆ ಜಲ್ಲಿ ಹಾಕಿಸುವುದಲ್ಲದೆ, ಶೀಘ್ರವಾಗಿ ಪೂರ್ತಿ ರಸ್ತೆಗೆ ಟಾರು ಮಾಡಿಸಿಕೊಡುವಂತೆಯೂ ಗ್ರಾಮಸ್ಥರು ಶಾಸಕರಲ್ಲಿ ಅರಿಕೆ ಮಾಡುತ್ತೇವೆ.

ಗ್ರಾಮಸ್ಥರ ಪರವಾಗಿ,
ಕೆ. ಎಸ್. ಶಾಂತಾರಾಂ, ಕೆಸವೆ.
ಉಪಪ್ರಧಾನ್, ಬಿಂತ್ರವಳ್ಳಿ ಮಂಡಲ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ, ಸಿರಿಮನೆ ನಾಗರಾಜ್, ಅಚ್ಚು : ದೀಪಶಿಖೆ ಅಚ್ಚು ಕೂಟ, ಕೊಪ್ಪ.